ಇರಲೇ ಇಲ್ಲ. ದೇವರ ಪೂಜೆ ಮಾಡುವವರಿಗೆ ಇರಬಾರದ ಎಲ್ಲಾ ಚಟಗಳನ್ನು ಸಾಕಿಕೊಂಡಿದ್ದು ಸಮಾಜದ ಜನರ ಅವಿಶ್ವಾಸಕ್ಕೆ ಪಾತ್ರನಾಗಿದ್ದ. ಭಕ್ತರು ನೀಡಿದ ಕಾಣಿಕೆ ಹಣ ಮುಂತಾದ ವಿಷಯದಲ್ಲಿ ಅವ್ಯವಹಾರ ಮಾಡಿ ಸಿಕ್ಕು ಬಿದ್ದ. ಹಾಗಾಗಿ ಕೆಲವೇ ದಿನಗಳಲ್ಲಿ ಟ್ರಸ್ಟಿನವರು ಅವನನ್ನು ಪೂಜಾ ಕಾರ್ಯದಿಂದ ಬಿಡಿಸಿಬಿಟ್ಟರು. ಇಷ್ಟರಲ್ಲಿಯೆ ಮೂರು ಮಕ್ಕಳನ್ನು ಹೆತ್ತ ಸುನಂದಾಗೆ ಇವನಿಂದ ಸಂಸಾರ ನಿಭಾಯಿಸುವುದು ಆಗುವುದಿಲ್ಲ ಎಂದು ಮನದಟ್ಟಾಗಿದ್ದು ಈತನಿಗೆ ತಾನೇ ಸಾಕಬೇಕಾಗಿದ್ದಲ್ಲದೆ ಇವನ ಚಟಗಳನ್ನೂ ಪೋಷಿಸಬೇಕಾಗಿದ್ದು ಬಹಳ ಭಾರವೆನಿಸತೊಡಗಿತು. ಆದರೂ ಬಿಡದೆ ತಾನೇ ಅವನಿಗಾಗಿ ಅನೇಕ ಉದ್ಯೋಗಗಳನ್ನು ಹೊಂದಿಸಿ ದುಡಿಯಲು ಹಚ್ಚಿದಳು. ''ನಿಮ್ಮ ಕೈಲಿ ಉಳ್ಳಾಗಡ್ಡಿ ಬೊಳ್ಳೊಳ್ಳಿ ಬಿಡೋದು ಆಗಂಗಿಲ್ಲ. ಪುರೋಹಿತಗಿರಿಗಿ ನಿಮ್ಮ ಬಾಯಿಚಪಲ ನಡೆಂಗಿಲ್ಲ. ಸುಮ್ಮ ಆ ವೆಂಕಟೇಶನ ಅಂಗಡ್ಯಾಗ ಕೂಡ್ರಿ. ಅಷ್ಟೋ ಇಷ್ಟೋ... ಕೊಟ್ಟಷ್ಟು ಪಗಾರ ಕೊಡಲಿ. ಯಾವ ಖರ್ಚಿಗಾದರೂ ಆಗ್ತದ. ನಾ ಅವನಿಗೆ ಎಲ್ಲ ಹೇಳಿ ಕೇಳಿ ಬಂದೀನಿ. ನಾಳಿಗಿ ಕಳಸು ಅಂದಾನ. ಮುಂಜಾನೆ ಜಲ್ದಿ ಎದ್ದು ತಯಾರಾಗಿ ಹೋಗ್ರಿ. ಸೂರ್ಯ ನೆತ್ತಿಗಿ ಬರತನ ಹಾಸಿಗ್ಯಾಗ ಹೊಳ್ಳ್ಯಾಡಬ್ಯಾಡ್ರಿ. ನಾ ಭಕ್ರಿ ಮಾಡ ಮನಿಗಿ ಹೋದೆನಂದ್ರ ನಿಮಗ ನಿಶ್ಚಿಂತಿ. ಮಗಳ ಕಡಿ ಇಪ್ಪತ್ತು ಸಲ ಚಾ ಮಾಡಿಸಿ ಕುಡಕೋತ ಹೊತ್ತ ಕಳಿಶೀರಿ. ನಾಳೆ ಕರೆಕ್ಟ್ ಟೈಮಿಗಿ ದುಕಾನಕ್ಕ ಹೋಗ್ರಿ'' ಅಂತ ಹೀಂಗೆ ಆಕಿ ಅವನನ್ನು ಜತಲಾಯಿಸಿದಳು. ಆದರೆ, ಅಲ್ಲಿಯೂ ಸರಿಯಾಗಿ ಕೆಲಸ ಮಾಡದೆ ಹೋದ. ಸುನಂದಾ ಮತ್ತೆ ಯಾರನ್ನೋ ಬೇಡಿಕೊಂಡು ಮನೆಮನೆಗೆ ಹಾಲು ಹಾಕುವ ಕೆಲಸಕ್ಕೆ ಹಚ್ಚಿದಳು. ಸರಿಯಾದ ಸಮಯಕ್ಕೆ ಹಾಲು ವಿತರಿಸದ್ದಕ್ಕಾಗಿ ಆ ಕೆಲಸ ಹೋಯಿತು. ಹೀಗೆ ಪ್ರಾಣೇಶನನ್ನು ತನ್ನ ಬದುಕಿನ ದಾರಿಯಲ್ಲಿ ಜೊತೆಯಾಗಿಟ್ಟುಕೊಳ್ಳಲು ಪ್ರಯತ್ನ ಪಟ್ಟಳು. ಆತ ಮಾತ್ರ ಯಾವುದನ್ನೂ ನೆಚ್ಚಿಕೊಂಡು ಮಾಡದ ಕಾರಣ ಸುನಂದಾಗೆ ಭಾಳ ತ್ರಾಸಾಗತಿತ್ತು. ಆ ತ್ರಾಸೆಲ್ಲ ಸಿಟ್ಟು, ತಾಪವಾಗಿ ಮಾರ್ಪಟ್ಟು ಅವನೊಡನೆ ನಿತ್ಯವೂ ಜಗಳವಾಡಿ ಕೂಗಾಡುತಿದ್ದಳು. ಹೀಗೆ ಕೂಗಾಡಿ ಜಗಳವಾಡಿ ಹೆಣ್ತಿ ಮಕ್ಕಳನ್ನ ಸಾಕಲಾಗದವರು ಮನ್ಯಾಗ ಯಾಕ ಇದ್ದೀರಿ ಅಂತ ರಂಪಾಟ ಮಾಡಿದಾಗ ಆತನೂ ಇಕಿಗೆ ಪಾಠ ಕಲಿಸೇಬಿಡ್ತೀನಿ ಅಂತ ಆ ದಿನ ಮನೆ ಬಿಟ್ಟುಹೋದ. ಮೈಯಾಗಿನ ಸೊಕ್ಕು ಇಳಿದು ಮನಸ್ಸಿನ ನಾಚಿಕೆನೂ ಕಮ್ಮಿಯಾಗಿ ಒಂದುದಿನ ಮನೆಗೆ ಬಂದಬಿಟ್ಟ. ಸುನಂದಾ ಅವನನ್ನು ಸುತಾರಾಂ ಮನೆಗೆ ಸೇರಿಸಲಿಲ್ಲ. ಅವನಿಲ್ಲದ ಬದುಕು ರೂಢಿಯಾಗಿತ್ತು. ಜೀವನದ ಬಂಡಿಗೆ ಆತ ಆವಶ್ಯಕ ಅನಿಸಲಿಲ್ಲ. ಅಕ್ಕಪಕ್ಕದವರೂ ಸುನಂದಾಗೆ ಸಮಾಧಾನ ಮಾಡಿಕೊಳ್ಳಲು, ಪ್ರಾಣೇಶಗೆ ಛಂದಾಗಿ ಬದುಕು ಮಾಡಲು ಒಂದು ಮಾತು ತಿಳಿ ಹೇಳಿದರು. ಸುನಂದಾ ಯಾವುದಕ್ಕೂ ಬಗ್ಗಲಿಲ್ಲ. ''ಅಂವಾ ಸಾಲ ಹೆಚ್ಚಾದಾಗೆಲ್ಲ ಹಿಂಗೇ ಬಿಟ್ಟು ಬಿಟ್ಟು ಹೋಗತಾನ. ಸಾಲಗಾರರು ಮನಿ ಮುಂದ ಬಂದು ನಿಂತಾಗ ಅವನಿಗಿ ನಾಚಿಗಿ ಆಗಬೇಕೂ... ಆದರ ಆಗಂಗಿಲ್ಲ. ನನಗ ನನ್ನ ಮಕ್ಕಳಿಗಿ ಖಜೀಲಾಗ್ತದ. ಆಗ ಅವರಿಗಿ ಉತ್ತರ ಕೊಡಲಿಕ್ಕಿ ನೀವು ಬರತೀರೇನೂ?...'' ಎಂದು ಮಧ್ಯವರ್ತಿಗಳನ್ನು ಕೇಳಿದಾಗ ಅವರು ಬಾಯಿ ಮುಚ್ಚಿಕೊಂಡು ಹೋದರು. ಅವಳಿಗೆ ಗಂಡನ ಮೇಲೆ ಭರವಸೆ ಹೊರಟುಹೋಗಿ ವರುಷಗಳೇ ಆಗಿತ್ತು. ಪ್ರೀತಿ ಗೌರವ... ಉಹೂಂ... ಅದೂ ಇಲ್ಲ... ಹಾಗಾಗಿ ಅವನಿಗೆ ಏಕವಚನವೇ ಪ್ರಧಾನವಾಗಿತ್ತು. ಪ್ರಾಣೇಶನಿಗೂ ಏನನ್ನಿಸಿತೋ... ಸುನಂದಾಳಿಂದ ತಿರಸ್ಕರಿಸಿಕೊಂಡ ಆ ದಿನ ಆತ ಮನೆ ಬಿಟ್ಟು ಹೋದವನು ಮತ್ತೆ ಈ ಕಡೆ ತಲೆ ಹಾಕಲೇ ಇಲ್ಲ.

ಆತ ಮನೆ ಬಿಟ್ಟು ಹೋಗಿ ಹತ್ತಾರು ವರುಷಗಳೆ ಆಗಿರಬಹುದು. ಒಮ್ಮೆಯೂ ಊರಕಡೆ, ಮನೆಕಡೆ ತಲೆ ಹಾಕಿರಲಿಲ್ಲ. ನಾಚಿಕೆಯಿಲ್ಲದ ಬದುಕು. ಇಷ್ಟು ದಿನ ಬರದೇ ಹೆಂಗಿದ್ದಾನು... ಬಂದೆ ಬರ್ತಾನ ಎಂದುಕೊಂಡಿದ್ದಳು. ತನಗೇ ಗೊತ್ತಿಲ್ಲದೆ ದಾರಿಯೂ ಕಾಯುತಿದ್ದಳೇನೊ. ಆತ ಒಮ್ಮೆಯೂ ಸುಳಿಯದಾಗ ಸುನಂದಾಗೆ ಅಳುಕು. ಒಮ್ಮೊಮ್ಮೆ ಆತ ಬದುಕಿರೋದೆ ಅನುಮಾನ